ಕಣ್ಣಿನಲ್ಲಿ ಒಸರಾಗುತ್ತಿತ್ತು. ಅವಳ ಮನಸ್ಸು ಮಾತಿಗೆ ಶುರುವಿಟ್ಟಿತು.

‘ನಿನ್ನ ಇಂಥಾ ಪ್ರೀತಿಯ ಸ್ಪರ್ಶಕ್ಕೇ ಅಲ್ಲವೆ ನನ್ನ ಒರಟುತನ ಕರಗಿ ಕಡಲಾಗುವುದು? ನನ್ನೊಳಗೆ ಒಂದು ಮಿಂಚು ಹರಿಯುವುದು ಎಂದು ನೀನೇ ಹೇಳಿಲ್ಲವೇ ಎಷ್ಟೋ ಬಾರಿ.

ನಿನ್ನ ಕೈಯೊಳಗೆ ಕೈಸೇರಿಸಿದಾಗ ಯಾವತ್ತೂ ಮಿಂಚು ಹರಿಯುತ್ತಿರಲಿ ಎಂಬುದೇ ನನ್ನ ಪ್ರತಿ ಬಾರಿಯ ಪ್ರಾರ್ಥನೆ. ಇವತ್ತು ಸಂಜೆ ನಮ್ಮೂರಿನ ಸೌಪರ್ಣಿಕಾ ನದಿ ತೀರದಲ್ಲಿ ಕುಳಿತಾಗಲೂ, ಅಲೆ ಬಂದು ಬಡಿದಾಗಲೂ ನನ್ನೊಳಗೆ ಈ ಪ್ರಾರ್ಥನೆ ಜೀವಂತವಿತ್ತು. ಅದೇ ಗುಂಗಿನಲ್ಲಿ ನಾನುಳಿದೆ. ಹೀಗೇಕೆ ಈಗ ನಿನ್ನ ಉಸಿರು ಕ್ಷೀಣಿಸಿತು? ನನ್ನ ಪ್ರಾರ್ಥನೆ ಸಾಲಲಿಲ್ಲವೇ?’



ಬಸ್ಸಿನಲ್ಲಿದ್ದ ಎಲ್ಲ ಜೀವವೂ ಮಲಗಿತ್ತು. ಜೀವಾ ಗುನುಗತೊಡಗಿದಳು. ಗುನುಗುತ್ತಲೇ ಅವನಿಗದು ಕೇಳಲಿ ಎಂದು ಒಮ್ಮೊಮ್ಮೆ ದನಿ ಏರಿಸಿದಳು. ಅದು ಬರಿಯ ಸ್ವಗತವಲ್ಲ. ಮಾತು ಮಾತೇ. ಕತ್ತಲು ಅವಳ ಮಾತಿಗೆ ಕಿವಿಯಾಯಿತು. ಆ ಗೂಡಿನ ಅಷ್ಟೂ ಉಸಿರುಗಳು ಆಲಿಸಿದವು.

‘ದಯಾ, ಅಪ್ಪ ಯಾವತ್ತೂ ಒಂದು ಮಾತು ಹೇಳುತ್ತಿದ್ದರು. ಪ್ರಾರ್ಥಿಸುವುದನ್ನು ಬಿಡಬೇಡ ಎಂದು. ಪ್ರಾರ್ಥನೆಗೆ ಇರುವುದಕ್ಕಿಂತ ಹೆಚ್ಚಿನ ಶಕ್ತಿ ಇನ್ನಾವುದಕ್ಕೂ ಇಲ್ಲ ಅನ್ನುತ್ತಿದ್ದರು. ಯಾವ ದೇವರ ಚಿತ್ರವೂ ನಿನ್ನ ಕಣ್ಣ ಮುಂದೆ ಬರಬೇಕಿಲ್ಲ. ನಿನಗೆ ನೀನು ಪ್ರಾರ್ಥಿಸುತ್ತ ಹೋಗು. ಎಲ್ಲ ಚಿತ್ತ ಚಾಂಚಲ್ಯವನ್ನು ಕಲಕಿಬಿಡುವ ಶಕ್ತಿ ಅದಕ್ಕಿದೆ. ಎಂತಹ ಕೋರಿಕೆಯನ್ನೂ ಮನ್ನಿಸಿಬಿಡುವ ಶಕ್ತಿ ಅದಕ್ಕಿದೆ. ಅಂತಹದೊಂದು ಪ್ರಾರ್ಥನೆಯಿಂದಲೇ ಅಲ್ಲವೇ ನೀನು ದಕ್ಕಿದ್ದು ನನಗೆ ಅನ್ನುತ್ತಿದ್ದರು.’

‘ದಯಾ, ನನ್ನ ನಿನ್ನ ಪ್ರೀತಿಗೆ ನಾಳೆ ಬೆಳಗಾದರೆ ಹನ್ನೆರಡು ವರ್ಷ. ಇಂಥಹದೊಂದು ಬಸ್ಸಿನ ಪಯಣದಲ್ಲೇ ಸಿಕ್ಕಿದವನು ನೀನು ನನಗೆ. ನೀನು ಜೀವನದ ಪಯಣಿಗನಾಗಿ ಬಿಡುತ್ತಿ ಎಂದು ನಾನು ಎಂದೂ ಎಣಿಸಲಿಲ್ಲ. ಇಷ್ಟು ದಿನಗಳಲ್ಲಿ ಒಂದು ಸತ್ಯವನ್ನು ನಿನಗೆ ಹೇಳಬೇಕಾಗಿತ್ತು. ಇವತ್ತು ಹೇಳುತ್ತೇನೆ, ಕೇಳಿಸಿಕೋ, ನಿನ್ನ ದೇಹದ ಕಿವಿ ಮುಚ್ಚಿದ್ದರೂ ಚಿಂತೆಯಿಲ್ಲ, ನಿನ್ನ ಆತ್ಮವಾದರೂ ಕೇಳಿಸಿಕೊಳ್ಳುವುದೆಂಬ ನಂಬಿಕೆ ನನ್ನದು. ಆವತ್ತು ನನ್ನ ಜೀವವನ್ನು ಉಳಿಸಿದ್ದು ಅಪ್ಪನ ಪ್ರಾರ್ಥನೆ ಮತ್ತು ಅಮ್ಮನ ಮೌನ.’

ನಿನಗೆ ಗೊತ್ತಿಲ್ಲ ಅನಿಸುತ್ತದೆ. ಅಮ್ಮ ಸ್ವಾತಿಮುತ್ತು ಕಂಪೆನಿಯಲ್ಲಿ ಅಕೌಂಟೆಂಟ್ ಕೆಲಸದಲ್ಲಿದ್ದಳು. ಅದು ಮಿನರಲ್ ವಾಟರ್ ತಯಾರಿಸುವ ಬೃಹತ್ ಕಂಪೆನಿ. ಇಡೀ ದೇಶದಲ್ಲಿ ಅದರ ದೊಡ್ಡ ಜಾಲವಿತ್ತು. ಅಪ್ಪ ಅದೇ ಕಂಪೆನಿಯ ದಕ್ಷಿಣ ಭಾರತದ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದರು. ಇಬ್ಬರಿಗೂ ಪ್ರೀತಿ ಬೆಳೆಯಿತು. ಅಮ್ಮ ಧಾರವಾಡದವಳು. ಅಪ್ಪನೂರು ಉಡುಪಿ. ಅಚ್ಚರಿ ಎಂದರೆ ಅವರ ಮದುವೆಗೆ ಯಾರೂ ಅಡ್ಡಿ ಬರಲಿಲ್ಲ. ಅಪ್ಪನ ಮನೆಯವರೇ ಎಲ್ಲವನ್ನೂ ನಡೆಸಿಕೊಟ್ಟರು. ಆರೇ ತಿಂಗಳಿಗೆ ಅಮ್ಮ ಕನ್ಸೀವ್ ಆದಳು. ಕೆಲಸ ಮಾತ್ರ ಬಿಡಲಿಲ್ಲ. ಏಳನೇ ತಿಂಗಳಿಗೆ ಕಾಲಿಡುವ ಹೊತ್ತಿಗೆ ಅತೀವ ಹೊಟ್ಟೆ ನೋವು ಕಾಣಿಸಿಕೊಂಡಿತು. ತಕ್ಷಣ ಆಸ್ಪತ್ರೆಗೆ ಕರೆದೊಯ್ದರು. ಈ ಕ್ಷಣವೇ ಆಪರೇಶನ್ ಮಾಡಿ ಮಗುವನ್ನು ಹೊರತೆಗೆಯದೇ ಹೋದರೆ ಮಗುವಿನ ಅಮ್ಮ ಉಳಿಯುವ ಆಸೆ ಬಿಟ್ಟುಬಿಡಿ ಎಂದು ಬಿಟ್ಟರು.

‘ಮಗು? ಅದು ಉಳಿದೀತೇ?’

‘ಕಷ್ಟ’ ಎಂದರು ಡಾಕ್ಟರು ಸಣ್ಣದನಿಯಲ್ಲಿ.

ಆಪರೇಷನ್ ಮಾಡಿದರೆ ಕೈಗೆ ಬಂದಿದ್ದು ಥೇಟ್ ಮೊಲದ ಮರಿಯಂಥಾ ಮಗು. ಸುಮ್ಮನೆ ಒಂದು ಮುಟಿಗೆಯಲ್ಲಿ ಹಿಡಿಯಬಹುದಾದಷ್ಟು, ಮುಟ್ಟಿದರೆ ಪಿಚಿಪಿಚಿ ಅಂದೀತೇನೋ. ಚರ್ಮದ ಹಾಲು ಹೊದಿಕೆಯಂತೆ ಮುಚ್ಚಿಕೊಂಡಿದ್ದ ಅದರ ಎದೆ ಮೃದುವಾಗಿ ಹೊಡೆದುಕೊಳ್ಳುತ್ತಿತ್ತು. ಮುಖ, ಕಣ್ಣು, ಹುಬ್ಬು, ಹಣೆ, ಬಾಯಿ, ಮೂಗು ಯಾವುದಕ್ಕೂ